ದಿನಾಂಕ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 3 ನೇ ಎದುರುದಾರರಪರ ವಕೀಲರಾದ ಶ್ರೀಮತಿ ಎ.ಬಿ ರವರಿಂದಃ-**

ತನಿಖೆಯ ಸಂದರ್ಭದಲ್ಲಿ ಆರೋಪಿಯ ಗುರುತಿಸುವಿಕೆಗಾಗಿ ಆತನಿಗೆ ಸಂಬಂಧಿಸಿದ ಆಧಾರ್ ಕರ್ಡ್ ಮತ್ತು ಚಾಲನಾ ಪರವಾನಗಿಯನ್ನು ಪಡೆದುಕೊಳ್ಳುತ್ತೇವೆ. ನಾನು ತನಿಖೆಯ ಸಂದರ್ಭದಲ್ಲಿ ಈ ಅರ್ಜಿಯ 1 ನೇ ಎದುರುದಾರರ ಆಧಾರ್ ಕರ್ಡ್ ಅನ್ನು ಪಡೆದುಕೊಂಡಿದ್ದೆನು. 1 ನೇ ಎದುರುದಾರರ ಆಧಾರ್ ಕರ್ಡ್ ನಲ್ಲಿರುವ ವಿವರಗಳಿಗೂ ದೋಷರೋಪಣೆ ಪಟ್ಟಿಯಲ್ಲಿ ನಮೂದಿಸಿರುವ ಆರೋಪಿಯ ವಿವರಗಳಿಗೂ ತಾಳೇ ಆಗುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಆರೋಪಿಯ ವಿವರಗಳನ್ನು ಟೈಪ್ ಮಾಡುವಾಗ ತಪ್ಪಾಗಿ ಮಾಡಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ದೋಷಾರೋಪಣೆ ಪಟ್ಟಿಯಲ್ಲಿ

ನಮೂದಿಸಿರುವ ಆರೋಪಿಯ ವಿವರಗಳು ಸರಿಯಾಗಿದ್ದು, ಅರ್ಜಿದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಆರೋಪಿಯ ಹೆಸರನ್ನು ತಪ್ಪಾಗಿ ಬೆರಳಚ್ಚು ಮಾಡಲಾಗಿದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಸ್ಥಳದಿಂದ ನಮ್ಮ ಠಾಣೆಗೆ ಒಂದೂವರೆ ಕಿ.ಮೀ ಅಂತರವಿದೆ. ಅಪಘಾತವು ಜೀಪ್ ಸಂಖ್ಯೆ ಕೆಎ-11-ಎನ್-1001 ವಾಹನದ ಚಾಲಕನಾದ ಶ್ರೀನಿವಾಸ್ ಅರಸ್ ಎಚ್.ಎಲ್ ರವರ ಅತಿ ವೇಗ ಮತ್ತು ಅಜಾಗರೂಕತೆಯಿಂದ ಉಂಟಾಗಿರುವುದಾಗಿ ತನಿಖೆಯ ಸಂದರ್ಭದಲ್ಲಿ ನನಗೆ ಕಂಡು ಬಂದಿದ್ದರು ಸಹಾ ನಾನು ಅವರಿಗೆ ಪರಿಹಾರ ಸಿಗಲು ಅನುಕೂಲವಾಗುವಂತೆ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತದಿಂದ ಈ ಅರ್ಜಿಯ ಅರ್ಜಿದಾರರಿಗೆ ಗಾಯವಾಗಿದ್ದಲ್ಲದೇ ಜೀಪ್ ಗೂ ಸಹಾ ಜಖಂಗಳು ಆಗಿದ್ದು, ಸದರಿ ಜೀಪ್ ಗೆ ಮೂರನೇ ಪಾರ್ಟಿ

ವಿಮೆ ಇದ್ದುದ್ದರಿಂದ, ಅರ್ಜಿದಾರರಿಗೆ ಮತ್ತು ಜೀಪಿಗೆ ವಿಮೆ ಹಣ ಸಿಗಲೆಂದು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.